**ಓ.ಎಸ್. ನಂ. 354/2022 ಪಿ.ಡಬ್ಲೂ-1 ಹೆಸರು -ಮಹದೇವಸ್ವಾಮಿ**

**ಸಾಕ್ಷಿಯನ್ನು ದಿನಾಂಕಃ 10.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಎನ್ ಪಿ ಡಿ, ವಕೀಲರಿಂದಃ-**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ, ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತವೆ .

**ಪ್ರಮಾಣ ಪತ್ರಿಕೆಯೊಂದಿಗೆ ಸಲ್ಲಿಸಿರುವಂತಹ ದಾಖಲಾತಿಯನ್ನು ಈ ಕೆಳಕಂಡಂತೆ ಗುರುತಿಸಲಾಯಿತು.**

1. ದಿನಾಂಕ 05.10.2021 ರಂದು ಪ್ರತಿವಾದಿಯು ನನಗೆ ಜಾರಿ ಮಾಡಿಕೊಟ್ಟ ಆನ್ ಡಿಮಾಂಡ್ ಪ್ರನೋಟ್ ಮತ್ತು ಹಣ ಸಂದ ರಶೀದಿಯನ್ನು ಹಾಜರು ಮಾಡಿರುತ್ತೇನೆ. ಇದನ್ನು ನಿಪಿ-1 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯಲ್ಲಿನ ಪ್ರತಿವಾದಿ ಸಹಿಗಳನ್ನು ನಿಪಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು.

2. ನಾನು ಪ್ರತಿವಾದಿ ಗೆ ನನ್ನ ವಕೀಲರ ಮೂಲಕ ದಿನಾಂಕ 20.06.2022 ರಂದು ಕಾನೂನು ತಿಳುವಳಿಕೆ ನೋಟಿಸನ್ನು ಜಾರಿ ಮಾಡಿದ್ದು ಇದನ್ನು ನಿಪಿ-2 ಎಂದು ಗುರುತಿಸಲಾಯಿತು.

3. ಅಂಚೆ ರಶೀದಿಯನ್ನು ಮತ್ತು ಅಂಚೆ ಸ್ವೀಕೃತ ಹಿಂಬರಹವನ್ನು ನಿಪಿ-2(ಎ) ಮತ್ತು 2(ಬಿ) ಎಂದು ಗುರುತಿಸಲಾಯಿತು.

4. ಪ್ರತಿವಾದಿಯು ನಿಪಿ-2ರ ನೋಟಿಸಿಗೆ ದಿನಾಂಕ 28.06.2022 ರಂದು ಪ್ರತ್ಯುತ್ತರವನ್ನು ನೀಡಿದ್ದು, ನಿಪಿ-3 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಆದಾಗ್ಯೂ ದಾಖಲಾತಿಗಳಿಗೆ ಸಂಬಂಧಿಸಿದಂತೆ ಮಾತ್ರ ಪಾಟೀ ಸವಾಲಿಗಾಗಿ ನಿಗದಿಪಡಿಸಿ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**